ದಿನಾಂಕಃ **02.08.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ

02. ನನ್ನ ಜನ್ಮ ದಿನಾಂಕ 08.07.1979 ಇರುತ್ತದೆ. ಕುಟುಂಬದ ಮೂಲ ಪುರುಷ ನನ್ನ ಅಜ್ಜ ಫಕೀರಪ್ಪನನ್ನು ನಾನು ನೋಡಿರುವುದಿಲ್ಲ. ಮೂಲ ಪುರುಷ ಫಕೀರಪ್ಪನ ಹೆಂಡತಿ ಹೆಸರು ಫಕೀರಮ್ಮ ಇರುತ್ತದೆ. ಸದರಿ ಮೂಲ ಪುರುಷನಿಗೆ ಇಬ್ಬರು ಗಂಡುಮಕ್ಕಳು ಮತ್ತು ಮೂವರು ಹೆಣ್ಣುಮಕ್ಕಳು ಇರುತ್ತಾರೆ. ಅವರ ಹೆಸರುಗಳು ಹನುಮವ್ವ, ನಾಗಮ್ಮ, ಸುಂದರಮ್ಮ, ಹನುಮಂತಪ್ಪ, ಮತ್ತು ಸಕ್ರಪ್ಪ . ನಿಡಿ1 ಪಾಲುವಿಭಾಗ ಪತ್ರದಲ್ಲಿ ಯಾರು ಯಾರಿಗೆ ಯಾವ ಯಾವ ಹಿಸ್ಸೆಗಳನ್ನು ಕೊಡಲಾಗಿದೆ ಎಂಬ ಬಗ್ಗೆ ವಿವರಗಳು ಇಲ್ಲವೆಂದರೆ ಸರಿ. ನಿಡಿ1 ರಲ್ಲಿ ಮೂಲ ಪುರುಷ ಹೆಣ್ಣುಮಕ್ಕಳಿಗೆ ಯಾವುದೇ ಹಿಸ್ಸೆಯನ್ನು ಕೊಟ್ಟಿಲ್ಲವೆಂದರೆ ಸರಿ. ನಿಡಿ1 ನ್ನು ಯಾರು ನೀಡಿದ ಮಾಹಿತಿ ಮೇರೆಗೆ ಯಾರು ತಯಾರಿಸಿದ್ದರು ಎಂದು ನನಗೆ ಗೊತ್ತಿಲ್ಲ. ನಿಡಿ1 ತಯಾರಾದ ದಿನಾಂಕದಂದು ಯಾರು ಯಾರು ಉಪಸ್ಥಿತರಿದ್ದರು ಎಂದು ನನಗೆ ಗೊತ್ತಿಲ್ಲವೆಂದರೆ ಸರಿ. ನಿಡಿ1 ಕ್ಕೆ ಯಾರು ಯಾರು ಸಹಿಗಳನ್ನು ಮಾಡಿದ್ದಾರೆಂದು ನನಗೆ ಗೊತ್ತಿಲ್ಲವೆಂದರೆ ಸರಿ. ನಿಪಿ8 ಪಹಣಿ ಪ್ರಕಾರ ಸದರಿ ಪಹಣಿಯಲ್ಲಿರುವ ಆಸ್ತಿಯು ಇವತ್ತಿಗೂ ವಾದಿಗಳ ತಂದೆ ಮತ್ತು ನನ್ನ ತಂದೆಯ ಹೆಸರಿನಲ್ಲಿ ಜಂಟಿ ಖಾತೆಯಲ್ಲಿದೆ ಎಂದರೆ ಸರಿ. ನಿಡಿ10 ಪಹಣಿಯಲ್ಲಿರುವ ಆಸ್ತಿಯು ಕೂಡಾ ಇವತ್ತಿಗೂ ವಾದಿಗಳ ತಂದೆ ಮತ್ತು ನನ್ನ ತಂದೆಯ ಹೆಸರಿನಲ್ಲಿ ಜಂಟಿ ಖಾತೆ ಹೊಂದಿದೆ ಎಂದರೆ ಸರಿ. ಅದೇ ರೀತಿ ನಿಡಿ12 ಪಹಣಿಯಲ್ಲಿರುವ ಆಸ್ತಿಯು ಕೂಡಾ ವಾದಿಗಳ ತಂದೆ ಮತ್ತು ನನ್ನ ತಂದೆಯ ಹೆಸರಿಗೆ ಜಂಟಿ ಖಾತೆ ಹೊಂದಿದೆ ಎಂದರೆ ಸರಿ. ನಿಡಿ1 ರ ಪ್ರಕಾರ ಮೂಲ ಪುರುಷನ ಹೆಂಡತಿ ಫಕ್ಕೀರಮ್ಮನಿಗೆ ಜೀವನಾಂಶಕ್ಕಾಗಿ ಸರ್ವೇ ನಂ. 486 ರಲ್ಲಿ 1 ಎಕರೆ 72 ಸೆಂಟ್ಸ್ ಕೊಡಲಾಗಿದೆ. ನಿಡಿ1 ವಿಭಾಗ ಪತ್ರದಲ್ಲಿ ನಾನು ಹೇಳುವಂತೆ ಫಕ್ಕೀರಮ್ಮನಿಗೆ ಸದರಿ ಜಮೀನನ್ನು ಜೀವನಾಂಶಕ್ಕಾಗಿ ಕೊಟ್ಟ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ಮೂಲ ಪುರುಷ ಫಕ್ಕೀರಪ್ಪನಿಗೆ ಒಟ್ಟು ಎಷ್ಟು ಜಮೀನುಗಳಿದ್ದವು ಮತ್ತು ಅವುಗಳ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ನಾನು ಹೇಳುತ್ತೇನೆ, ನನ್ನ ತಂದೆಯ ಹೆಸರಿನಲ್ಲಿ ಸರ್ವೇ ನಂ. 496 ರಲ್ಲಿ 14 ಎಕರೆ 57 ಸೆಂಟ್ಸ್ ಸ. ನಂ. 486 ರಲ್ಲಿ 1 ಎಕರೆ 72 ಸೆಂಟ್ಸ್ ಮತ್ತು 445 ರಲ್ಲಿ 6 ಎಕರೆ 5 ಸೆಂಟ್ಸ್ ಜಮೀನು ಇರುತ್ತದೆ. ಮೂಲ ಪುರುಷ ಮತ್ತು ಆತನ ಹೆಂಡತಿ ನನ್ನ ತಂದೆಗೆ ಮತ್ತು ವಾದಿಗಳ ತಂದೆಗೆ ಇಂತಿಂತಹ ಆಸ್ತಿಗಳನ್ನು ಜಮೀನುಗಳನ್ನು ನೀವು ತೆಗೆದುಕೊಳ್ಳಿ ಎಂದು ಯಾವುದೇ ದಸ್ತಾವೇಜಿನ ಮೂಲಕ ನೀಡಿಲ್ಲ ಎಂದರೆ ಸರಿ. ಸಾಕ್ಷಿಗೆ ಎಂ.ಆರ್. ನಂ. 66 ನ್ನು

ತೋರಿಸಿ ಇದರ ಪ್ರಕಾರ ಐಟಂ ನಂ.1 ಮತ್ತು 2 ನ್ನು ಸಕ್ರಪ್ಪನ ಮರಣಾ ನಂತರ ನಿಮ್ಮ ತಂದೆ ಹನುಮಂತಪ್ಪ ಪೌತಿ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಸರಿ ಎಂದಿದ್ದರಿಂದ ನಿಪಿ-**20** ಎಂದು ಗುರುತಿಸಿತು. ದಾವಾ ಐಟಂ ನಂ.11 ರ ಒಟ್ಟು ವಿಸ್ತೀರ್ಣ ಎಷ್ಟಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಮಹಾಜನದಹಳ್ಳಿ ಗ್ರಾಮದ ಮನೆ ಆಸ್ತಿಯ ದಾಖಲೆ ತೋರಿಸಿ ಇದು ನಿಮ್ಮ ತಂದೆಯವರ ಖಾತೆಯಲ್ಲಿದೆ ಎಂದು ಕೇಳಿದರೆ ಸರಿ ಎಂದಿದ್ದರಿಂದ ಆ ದಾಖಲೆಯನ್ನು ನಿಪಿ**21** ಎಂದು ಗುರುತಿಸಿತು. ನಿಪಿ21ರ ಆಸ್ತಿಯ ಖಾತೆಯನ್ನೂ ಕೂಡಾ ವಾದಿಗಳ ತಂದೆ ಸಕ್ರಪ್ಪನ ಮರಣಾ ನಂತರ ನನ್ನ ತಂದೆ ಪೌತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ಇದರ ಖಾತೆ ಮಾಡಿಸಿಕೊಳ್ಳುವಾಗ ನನ್ನ ತಂದೆಯು ಪಂಚಾಯಿತಿ ಕಚೇರಿಗೆ ವಂಶವೃಕ್ಷವನ್ನು ಹಾಜರು ಮಾಡಿದ್ದು ಅದರಲ್ಲಿ ನನ್ನ ತಂದೆಯು ಫಕ್ಕೀರಪ್ಪ ಮತ್ತು ಫಕ್ಕೀರಮ್ಮನಿಗೆ ಹೆಣ್ಣು ಮಕ್ಕಳು ಇರುವುದನ್ನು ತೋರಿಸದೇ ಪೌತಿ ಖಾತೆ ಮಾಡಿಸಿಕೊಂಡಿದ್ದರು ಎಂದು ವಂಶವೃಕ್ಷವನ್ನು ತೋರಿಸಿದ್ದು ಸರಿ ಎಂದಿದ್ದರಿಂದ ನಿಪಿ**22** ಎಂದು ಗುರುತಿಸಿತು.

(ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರು ಸಾಕ್ಷಿಯವರಿಗೆ ಅನಾರೋಗ್ಯವಿದೆ ಪಾಟೀಸವಾಲನ್ನು ಮುಂದೂಡಬೇಕೆಂದು ಕೋರಿದ್ದರಿಂದ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಹೂವಿನ ಹಡಗಲಿ.**